# ಕರ್ನಾಟಕ ಸರ್ಕಾರದ ನಡಾವಳಿಗಳು

**ವಿಷಯ:** – ಆಮ್ ಆದ್ಮಿ ಬೀಮಾ ಯೋಜನೆಯಡಿ ಫಲಾನುಭವಿಗಳನ್ನು ಗುರುತಿಸುವ ಬಗ್ಗೆ.

**ಓದಲಾಗಿದೆ:**– 1) ಸರ್ಕಾರಿ ಆದೇಶ ಸಂಖ್ಯೆ:– ಕಂಇ 25 ಡಿಎಸ್‌ಪಿ 2008, ದಿನಾಂಕ: 31.03.2008.
2) ಆಮ್ ಆದ್ಮಿ ಬೀಮಾ ಯೋಜನೆಯ ನಿಯಮಾವಳಿಗಳು 2008.

*****

**ಪ್ರಸ್ತಾವನೆ:–**

ಭಾರತ ಸರ್ಕಾರವು ರಾಜ್ಯ ಸರ್ಕಾರ ಹಾಗೂ ಭಾರತೀಯ ಜೀವ ವಿಮಾ ನಿಗಮ ಸಹಭಾಗಿತ್ವದೊಂದಿಗೆ ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಭೂರಹಿತ ಕುಟುಂಬಗಳಿಗೆ ಜೀವ ವಿಮೆ ಒದಗಿಸುವ ದೃಷ್ಟಿಯಿಂದ ಆಮ್ ಆದ್ಮಿ ಬೀಮಾ ಯೋಜನೆಯನ್ನು ಜಾರಿಗೆ ತಂದಿರುತ್ತದೆ. ಅದರಂತೆ ಮೇಲೆ ಓದಲಾದ (1)ನೇ ಸರ್ಕಾರಿ ಅಧಿಸೂಚನೆಯನ್ವಯ ಕರ್ನಾಟಕ ಸರ್ಕಾರವು ಯೋಜನೆಯನ್ನು ರಾಜ್ಯಾದ್ಯಂತ ಜಾರಿಗೆ ತಂದಿರುತ್ತದೆ. ಯೋಜನೆಯ ಅನುಷ್ಠಾನ ಕುರಿತು ಮೇಲೆ ಓದಲಾದ (2)ನೇ ಸರ್ಕಾರಿ ಅಧಿಸೂಚನೆಯನ್ವಯ ಮಾರ್ಗ ಸೂಚಿಗಳನ್ನು ಹೊರಡಿಸಿರುತ್ತದೆ. ಅದರಂತೆ, ಉದ್ದೇಶಿತ ಫಲಾನುಭವಿಗಳನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನೋಂದಾಯಿಸಿರುವ ಫಲಾನುಭವಿಗಳ ಪಟ್ಟಿಯಿಂದ ಆಯ್ಕೆ ಮಾಡಲು ಸೂಚಿಸಲಾಗಿತ್ತು. ಹಾಗೂ ಸಮಾಜ ಕಲ್ಯಾಣ ಇಲಾಖೆಯು ಸಿದ್ದಪಡಿಸಿರುವ ಅನುಸೂಚಿತ ಜಾತಿಗಳ ಪಟ್ಟಿಯಲ್ಲಿರುವ ಕುಟುಂಬಗಳಂತೆ ಗುರುತಿಸಲಾಗಿತ್ತು. ಇದುವರೆಗೂ ರಾಜ್ಯದಲ್ಲಿ 7.11 ಲಕ್ಷ ಫಲಾನುಭವಿಗಳನ್ನು ಗುರುತಿಸಲಾಗಿರುತ್ತದೆ. ಆದರೆ ಈ ಎಲ್ಲಾ ಪಟ್ಟಿಗಳಲ್ಲಿಯೂ ಲೋಪದೋಷವಿರುವುದರಿಂದ ಯೋಜನೆಯಡಿ ಫಲಾನುಭವಿಗಳನ್ನು ಗುರುತಿಸಲು ಅಡಚಣೆಯಾಗಿರುತ್ತದೆ. ಅಲ್ಲದೆ ಪಟ್ಟಿಯಲ್ಲಿರುವ ಫಲಾನುಭವಿಗಳ ನ್ಯೂನ್ಯತೆಯನ್ನು ತಿಳಿದುಕೊಳ್ಳಲು ಪುನ: ಭೌತಿಕ ಪರಿಶೀಲನೆ ಕಾರ್ಯವನ್ನು ತಾಲ್ಲೂಕು ಸಿಬ್ಬಂದಿಗಳೇ ಮಾಡಬೇಕಿರುತ್ತದೆ ಇದರಿಂದ ಹೆಚ್ಚಿನ ಕೆಲಸದ ಹೊರೆಯು ತಾಲ್ಲೂಕು ಸಿಬ್ಬಂದಿಯ ಮೇಲೆ ಬೀಳುತ್ತಿರುತ್ತದೆ. ಆದುದರಿಂದ ಯೋಜನೆಯಡಿ ಸಾಕಷ್ಟು ಫಲಾನುಭವಿಗಳನ್ನು ಗುರುತಿಸಲು ಸಹ ವಿಳಂಬವಾಗುತ್ತಿರುತ್ತದೆ.

ಯೋಜನೆಯ ಪರಿಣಾಮಕಾರಿಯಾದ ಅನುಷ್ಠಾನಕ್ಕಾಗಿ ತಂತ್ರಾಂಶವನ್ನು ಈಗಾಗಲೇ ಸಿದ್ದಪಡಿಸಲಾಗಿರುತ್ತದೆ. ಯೋಜನೆಯಡಿ ಅರ್ಹ ಫಲಾನುಭವಿಗಳನ್ನು ನೇರವಾಗಿ ಗುರುತಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸರ್ಕಾರ ತೀರ್ಮಾನಿಸಿರುತ್ತದೆ. ಅದರಂತೆ ಫಲಾನುಭವಿಗಳನ್ನು ಇತರ ಇಲಾಖೆಯಿಂದ ಲಭ್ಯವಿರುವ ಆಧಾರದ ಪಟ್ಟಿಯಂತೆ ಗುರುತಿಸುವ ಬದಲು ಉದ್ದೇಶಿತ ಫಲಾನುಭವಿಗಳು ಮುಖತ: ಸಂಬಂಧಪಟ್ಟ ತಾಲ್ಲೂಕು ಕಛೇರಿಯಲ್ಲಿ ನಿಗದಿತ ದಾಸ್ತಾವೇಜುಗಳ ಜೊತೆ ಸಲ್ಲಿಸಿದ ಅರ್ಜಿಯ ಆಧಾರದ ಮೇಲೆ ಗುರುತಿಸಬಹುದಾಗಿರುತ್ತದೆ.

ಈ ಹಿನ್ನಲೆಯಲ್ಲಿ ಕೆಳಕಂಡ ಆದೇಶವನ್ನು ಹೊರಡಿಸಿರುತ್ತದೆ.

## ಸರ್ಕಾರಿ ಆದೇಶ ಸಂಖ್ಯೆ: ಆರ್.ಡಿ. 55 ಡಿ.ಎಸ್.ಪಿ 2011, ದಿನಾಂಕ:27.08.2011

ಆಮ್ ಆದ್ಮಿ ಬೀಮಾ ಯೋಜನೆಯಡಿಯಲ್ಲಿ ಉದ್ದೇಶಿತ ಫಲಾನುಭವಿಗಳು ಮುಖತಃ ಸಂಬಂಧಪಟ್ಟ ತಾಲ್ಲೂಕು ಕಛೇರಿಯಲ್ಲಿ ಕೆಳಕಂಡ ದಾಸ್ತಾವೇಜುಗಳ ಜೊತೆ ಅರ್ಜಿ ನೀಡಬಹುದಾಗಿರುತ್ತದೆ. ಅದರಂತೆ

ದಾಸ್ತಾವೇಜುಗಳನ್ನು ಪರಿಶೀಲಿಸಿದ ನಂತರ ಅರ್ಜಿದಾರರು ಯೋಜನೆಯಡಿ ಅರ್ಹರು ಎಂದು ಕಂಡುಬಂದ ಪಕ್ಷದಲ್ಲಿ ಅವರನ್ನು ಯೋಜನೆಯಡಿ ಗುರುತಿಸಲು ಆದೇಶಿಸುತ್ತದೆ.

i. ಪಡಿತರ ಚೀಟಿ
ii. ಭೂರಹಿತ ಕೃಷಿ ಕಾರ್ಮಿಕ ದೃಢೀಕರಣ ಪತ್ರ
iii. ವಯಸ್ಸಿನ ದೃಡೀಕರಣ ಪತ್ರ (ಜನನ ಪ್ರಮಾಣ ಪತ್ರ, ಚುನಾವಣಾ ಗುರುತಿನ ಚೀಟಿ, ಪಡಿತರ ಚೀಟಿ)
iv. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ನೀಡಿರುವ ಜಾಬ್ ಕಾರ್ಡ್ (Job card)

ಇದರ ಬಗ್ಗೆ ಮಾರ್ಗ ಸೂಚಿಗಳನ್ನು ಪ್ರತ್ಯೇಕವಾಗಿ ಅನುಬಂಧದಲ್ಲಿ ಲಗತ್ತಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಅಶೋಕ್ ಕುಮಾರ್. ಸಿ. ಮನೋಳಿ)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಕಂದಾಯ ಇಲಾಖೆ.

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇವರಿಗೆ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 1000 ಪ್ರತಿಗಳನ್ನು ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯಕ್ಕೆ ಕಳುಹಿಸಬೇಕೆಂದು ಕೋರಿದೆ.

ಪ್ರತಿಯನ್ನು:

1. ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ) ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯದರ್ಶಿಗಳವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಮಾನ್ಯ ಮುಖ್ಯ ಮಂತ್ರಿಗಳವರ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ ಬೆಂಗಳೂರು.
6. ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ.
7. ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಮಂಡಲ, ವಿಧಾನ ಸೌಧ, ಬೆಂಗಳೂರು.
8. ವಿಭಾಗೀಯ ವ್ಯವಸ್ಥಾಪಕರು, ಭಾರತೀಯ ಜೀವ ವಿಮಾ ನಿಗಮ, ಪಿ & ಜಿಎಸ್ ಯುನಿಟ್, 4 ನೇ ಮಹಡಿ, ಜೆ.ಸಿ.ರೋಡ್, ಬೆಂಗಳೂರು-02
9. ಎಲ್ಲಾ ಪ್ರಾದೇಶಿಕ ಆಯುಕ್ತರು.
10. ಎಲ್ಲಾ ಜಿಲ್ಲಾಧಿಕಾರಿಗಳು.
11. ನಿದೇಶಕರು, ಖಜಾನೆ ಇಲಾಖೆ.ಬೆಂಗಳೂರು.
12. ಎಲ್ಲಾ ಉಪ ವಿಭಾಗಧಿಕಾರಿಗಳು/ ಎಲ್ಲಾ ತಹಸೀಲ್ದಾರರುಗಳಿಗೆ.
13. ಎಲ್ಲಾ ಜಿಲ್ಲಾ ಖಜಾನೆ ಹಾಗೂ ಉಪ ಖಜಾನೆ ಅಧಿಕಾರಿಗಳು.
14. ಹೆಚ್ಚುವರಿ ಪ್ರತಿ ಮತ್ತು ಶಾಖಾ ರಕ್ಷಾ ಕಡತ.